

# ಬಡತನಕ್ಕೆ ಸಿಕ್ಕ ಬಾಗಿನ

■ ಗೌರಿ

ಸಿ. ಬಾಬಾಜಾನ ನಿರ್ದೇಶಿಸಿರುವ ಕಿರುಚಿತ್ರ 'ಬಾಗಿನ'. ಇದು ತೀರಾ ಹೊಸರೀತಿಯ ಕಥೆಯನ್ನೇನೂ ಒಳಗೊಂಡಿಲ್ಲ. ಆದರೆ ಬಡತನದ ಬೇಗೆಯನ್ನು ಕಾಣಿಸುವ, ಅದರ ಮೂಲಕ ನಮ್ಮೆಲ್ಲರ ಹೃದಯವನ್ನು ಮೃದುಗೊಳಿಸುವ ಕಾಳಜಿ ಈ ಕಥೆಯ ಹಿಂದಿದೆ. ತಾಂತ್ರಿಕವಾಗಿ, ಕಲಾತ್ಮಕವಾಗಿ ಸಾಕಷ್ಟು ದೋಷಗಳೂ ಇಲ್ಲಿವೆ. ಆದರೆ ಬೆಂಗಳೂರು ಮಹಾನಗರದಿಂದ ದೂರವೇ ಇದ್ದುಕೊಂಡು, ಪ್ರಾದೇಶಿಕ ಸಂಪನ್ಮೂಲಗಳನ್ನೇ ಬಳಸಿಕೊಂಡು ಇಂಥದ್ದೊಂದು ಕಥೆಯನ್ನು ಜನರಿಗೆ ತಲುಪಿಸುವ ಛಲ ಈ ಕಿರುಚಿತ್ರದ ಹಿನ್ನೆಲೆಯಲ್ಲಿದೆ. ಹಾಗಾಗಿಯೇ ಡಬಲ್ ಮೀನಿಂಗ್ ಡೈಲಾಗ್‌ಗಳನ್ನು ಹೇಳಿ ಮಿಲಿಯನ್‌ಗಟ್ಟಲೆ ವ್ಯೂಸ್ ಪಡೆದುಕೊಳ್ಳುವ ಹಲವು ಪಾಪ್ಯುಲರ್ ಯೂಟ್ಯೂಬ್ ಚಾನಲ್‌ಗಳ ಕಂಟೆಂಟ್‌ಗಿಂತಲೂ, ಎಣಿಕೆಗೆ ನಿಲುಕದಷ್ಟು ಹಣ ಸುರಿದು, ತಾಂತ್ರಿಕವಾಗಿ ಅದ್ದೂರಿ ಸಿನಿಮಾ ಕಟ್ಟಿ, ಕಥೆಯ ಆತ್ಮ ಹುಡುಕಿದರೂ ಸಿಗದ ಎಷ್ಟೋ ಸಿನಿಮಾಗಳಿಗಿಂತಲೂ ಈ ಕಿರುಚಿತ್ರ ಮತ್ತದರ ಹಿಂದಿನ ಕಾಳಜಿ ಹೆಚ್ಚು ಮೌಲ್ಯಯುತವಾದದ್ದು.

ಸೋಮು ಉತ್ತರಕರ್ನಾಟಕದ ಹಳ್ಳಿಯೊಂದರ ತೀರಾ ಬಡಕುಟುಂಬದಲ್ಲಿನ ಹುಡುಗ. ಈಗಿನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವವನು. ಅವನ ಅಮ್ಮ ಹೊಟ್ಟೆಬಟ್ಟೆ ಕಟ್ಟಿ ಕೆಲಸ ಮಾಡಿ ಮನೆಯ ಖರ್ಚನ್ನು ತೂಗಿಸಿ, ಮಗನ ಶಿಕ್ಷಣವನ್ನೂ ಮುಂದುವರಿಸುತ್ತಿರುವವಳು. ಸೋಮು ಕಲಿಕೆಯಲ್ಲಿಯೂ ಜಾಣ. ಅವನ ಅಪ್ಪ ಇಡೀ ದಿನ ಕುಡಿದುಕೊಂಡಿರುವ, ಕುಡಿತಕ್ಕಾಗಿ ಹೆಂಡತಿಯ ದುಡಿಮೆಯನ್ನೂ ದೋಚುವ ಆಸಾಮಿ.

ಮನೆಯ ಕಷ್ಟದ ಕಾರಣಕ್ಕೇ ಸೋಮು ಶಾಲೆಯನ್ನು ಬಿಟ್ಟು ಅಮ್ಮನೊಟ್ಟಿಗೆ ಕೆಲಸಕ್ಕೆ ಹೋಗಬೇಕಾಗುತ್ತದೆ. ಕೆಲಸದ ಜಾಗದಲ್ಲಿ ಮೇಲ್ವಿಚಾರಕರು ಅಮ್ಮನ ಮೇಲೆ ಕಾಮದೃಷ್ಟಿ



**ಹೆಸರು:** ಬಾಗಿನ (ಕನ್ನಡ)
**ನಿರ್ದೇಶನ:** ಸಿ. ಬಾಬಾಜಾನ
**ನಿರ್ಮಾಣ:** ನವರಸ ಸ್ನೇಹಿತರ ವೇದಿಕೆ
**ಛಾಯಾಗ್ರಹಣ:** ಮಹ್ಮದ್ ಸಾದಿಕ್
**ತಾರಾಗಣ:** ಎನ್.ಬಿ. ದ್ಯಾಪೂರ, ಅನ್ನಪೂರ್ಣ ಉಂಡಿ, ಶಾರೂಖ್, ಮಹಮದ್ ಯೂಸೂಫ್, ಮಹಾಂತೇಶ್ ಹುಬ್ಬಳ್ಳಿ, ಜಯವಂತ ಗಾಮನಗಟ್ಟಿ, ಸುಕನ್ಯಾ

ಬೀರುವುದನ್ನು ನೋಡಿ ಅವನ ಮನಸ್ಸು ನೋಯುತ್ತದೆ. ಅಮ್ಮನಿಗೆ ಉಟ್ಟುಕೊಳ್ಳಲು ಒಂದು ಒಳ್ಳೆಯ ಸೀರೆಯೂ ಇಲ್ಲದಿರುವುದು ಅವನ ಮನಸ್ಸನ್ನು ಕದಡುತ್ತದೆ. ಅಮ್ಮನಿಗೆ ಸೀರೆ ಕೊಡಿಸಲಿಕ್ಕಾಗಿಯೇ ಹಣ ಕೂಡಿಡಲು ಶುರುಮಾಡುತ್ತಾನೆ. ಆದರೆ ಆ ಹಣವನ್ನೂ ಅಪ್ಪ ಕುಡಿತಕ್ಕೆ ದೋಚಿಬಿಡುತ್ತಾನೆ.

ಇದೇ ಸಮಯದಲ್ಲಿ ಎಂಎಲ್‌ಎ ಊರ ಕೆರೆಗೆ ಬಾಗಿನ ಅರ್ಪಿಸಲು ಬರುತ್ತಾನೆ. ಬಾಗಿನದಲ್ಲಿ ಸೀರೆಯೂ ಇರುವುದು ಸೋಮುವಿನ ಕಣ್ಣಿಗೆ ಬೀಳುತ್ತದೆ. ಬಾಗಿನ ಅರ್ಪಿಸಿ ಎಲ್ಲರೂ ಅತ್ತ ಹೋಗುತ್ತಿರುವ ಹಾಗೆಯೇ ಸೋಮು ಕೆರೆಗೆ ಇಳಿದು ಆ ಸೀರೆಯನ್ನು ಎತ್ತಿಕೊಳ್ಳಲು ಪ್ರಯತ್ನಿಸುತ್ತಾನೆ. ಆ ಪ್ರಯತ್ನದಲ್ಲಿ ಅವನೇ ನೀರಲ್ಲಿ ಮುಳುಗತೊಡಗುತ್ತಾನೆ.

ತೀವ್ರವಾದ ಬಡತನ, ಅದರಿಂದ ಮಕ್ಕಳ ಬದುಕಿನ ಮೇಲೆ ಆಗುವ ದುಷ್ಪರಿಣಾಮಗಳು, ಹೆಣ್ಣುಮಕ್ಕಳ ಮೇಲೆ ನಡೆಯುವ ಶೋಷಣೆ, ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ ಸಂಪ್ರದಾಯದ ಹೆಸರಿನಲ್ಲಿ ಆಹಾರ, ಉಡುಪುಗಳನ್ನು ನೀರಿನಲ್ಲಿ ಬಿಡುವ ರಾಜಕಾರಣಿಗಳ ಡೋಂಗಿತನ ಎಲ್ಲವೂ ಈ ಕಿರುಚಿತ್ರದಲ್ಲಿವೆ. ದೇಶಭಕ್ತಿಯ ಎಳೆಯನ್ನು ಜೋಡಿಸುವಂಥ ಒಂದು ಪಾತ್ರವೂ ಇಲ್ಲಿದೆ. ತಾಂತ್ರಿಕ ದೋಷಗಳು, ನಿರೂಪಣೆಯಲ್ಲಿನ ನಿಧಾನಗಳ ಆಚೆಗೂ ಕಲಾವಿದರ ಅಭಿನಯ ಗಮನಸೆಳೆಯುವಂತಿದೆ. ಸೋಮು ಎಂಬ ಹುಡುಗನ ಪಾತ್ರಲ್ಲಿ ನಟಿಸಿರುವ ಹುಡುನ ನಟನೆ ಮತ್ತು ಕಮಲಾ ಪಾತ್ರದ ನಟನೆ ವಿಶೇಷವಾಗಿ ಗಮನಸೆಳೆಯುತ್ತದೆ.

ಧಾರವಾಡದ ಹೊನ್ನಾಪುರ, ಚಂದ್ರಗಿರಿ ಗ್ರಾಮಗಳಲ್ಲಿ ಈ ಕಿರುಚಿತ್ರವನ್ನು ಚಿತ್ರೀಕರಿಸಲಾಗಿದೆ. ಒಂದು ಗ್ರಾಮದ ವಾತಾವರಣ ಈ ಚಿತ್ರಕ್ಕೆ ಅಧಿಕೃತತೆಯನ್ನು ಕೊಟ್ಟಿದೆ.

ಮನಮಿಡಿಯುವ ಕಥೆಯುಳ್ಳ ಈ ಕಿರುಚಿತ್ರ, ಅದನ್ನು ರೂಪಿಸಿದವರ ಕಾಳಜಿಯ ಕಾರಣಕ್ಕೇ ಗಮನಾರ್ಹವಾಗಿದೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3f3qb9p ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.